ರೂಢಿಸಿಕೊಂಡಿದ್ದರು. ಇನ್ನು ಅಕ್ಕಂದಿರಿಗೋ ಇಕ್ಕಳದಲ್ಲಿ ಸಿಕ್ಕಿಕೊಂಡ ಅನುಭವ. ಒಂದೆಡೆ ಎಷ್ಟಾದರೂ ಒಡಹುಟ್ಟಿದ ಪ್ರೀತಿಪಾತ್ರ ತಮ್ಮ, ತವರಿನ ಏಕಮಾತ್ರ ಗಂಡು ಸಂತಾನ. ಇನ್ನೊಂದೆಡೆ ಗಂಡಂದಿರು ಬಿಚ್ಚಿಡುವ ಕಠೋರ ವಾಸ್ತವ ಚಿತ್ರಣ.

ಅದೊಂದು ರವಿವಾರ, ಹಿರಿಯಣ್ಣ ಬೆಳಗಿನ ಆಸರಿ ಕುಡಿದು, ಕವಳವನ್ನು ಬಾಯಲ್ಲಿ ತುರುಕಿಕೊಂಡು ಸೊಪ್ಪುಗತ್ತಿ ಹಿಡಿದು ತೋಟದ ಕಡೆ ಹೊರಟಿದ್ದ. ‘ಆದರೆ, ಇದೇನು ಎಲ್ಲರೂ ಒಟ್ಟಿಗೇ ಪ್ರತ್ಯಕ್ಷ – ದೇವಾನುದೇವತೆಗಳ ಹಾಗೆ?’ ಅಂತ ಶ್ರೀಕಂಠ ಸಂತೋಷ – ಸಡಗರದಿಂದ ಹೇಳುವುದನ್ನು ಕೇಳಿ ಇವ ತಿರುಗಿ ನೋಡಿದವನಿಗೆ ಅಚ್ಚರಿಯೇ ಅಚ್ಚರಿ. ತನ್ನ ಇಬ್ಬರೂ ಹೆಣ್ಣುಮಕ್ಕಳು ತಮ್ಮ ಪತಿದೇವರೊಂದಿಗೆ ದುಡುದುಡು ಅಂಗಳಕ್ಕೆ ಇಳಿದು ಬರುತ್ತಿದ್ದಾರೆ. ಎಲ್ಲರೂ ಹೀಗೆ ಸದ್ದುಗದ್ದಲವಿಲ್ಲದೇ ಬಂದಿಳಿದಿದ್ದು ಅವನಿಗೂ ತುಂಬಾ ಸಂತೋಷವಾಗಿದೆ. ಅನಸೂಯಳಿಗಂತೂ ಸಂಭ್ರಮವೋ ಸಂಭ್ರಮ. ಎಷ್ಟಾದರೂ ಮಾತೃಹೃದಯ, ಭುವಿಯಷ್ಟು ವಿಶಾಲ. ‘ಮಕ್ಕಳೆಂತಕ್ಕೆ ಬಿಟ್ಟು ಬಂದ್ರೀ?’ ಅಂತ ಶ್ರೀಲಕ್ಷ್ಮಿಯನ್ನು ಕೇಳಿದಾಗ, ‘ಆಯೀ, ಒಂದು ಅರ್ಜೆಂಟ್ ಕೆಲಸ ಇತ್ತು – ಹಾಗಾಗಿ ನಾನು ಕಾರು ಮಾಡಿಸ್ಕಂಡು ಕಾರಹಳ್ಳೀಲಿ ಬಿಟ್ಟು ಇಲ್ಲಿಗೆ ನಡಕೊಂಡು ಬಂದೋ. ಊಟ ಮಾಡಿ ನಂಗೋಕೆ ತಿರುಗಿ ಹೋಗವು’ ಅಂತಂದಳು. ‘ಅದ್ಯಂತಾ ಅರ್ಜೆಂಟ್ ಕೆಲಸವೇ ಮಾರಾಯ್ತಿ ಅದೂ ಈ ಮನೇಲಿ?’ ಅಂತ ದೇಶಾವರಿ ನಗೆ ನಗುತ್ತ

